

ದಿನಾಂಕಗಳೆಲ್ಲವೂ ಘೋಷಣೆಯಾಗಿವೆ.

ಧ್ರುವ ಸರ್ಜಾ ಮತ್ತು ರಶ್ಮಿಕಾ ಮಂದಣ್ಣ ನಟಿಸಿರುವ ಹೈ ವೋಲ್ಟೇಜ್ ಸಿನಿಮಾ 'ಪೊಗರು'. ಫೆ. 19ರಂದು ಈ ಚಿತ್ರವನ್ನು ಬಿಡುಗಡೆ ಮಾಡಲಾಗುವುದು ಎಂದು ಚಿತ್ರತಂಡ ಘೋಷಿಸಿದೆ. ದರ್ಶನ್ ಅಭಿನಯದ ಬಹುನಿರೀಕ್ಷಿತ ಚಿತ್ರ 'ರಾಬರ್ಟ್' ಮಾರ್ಚ್ 11ಕ್ಕೆ ಬಿಡುಗಡೆ ಕಾಣಲಿದೆ. ತಮಿಳು ಚಿತ್ರರಂಗದಲ್ಲಿ ಚಿತ್ರಗಳ ಬಿಡುಗಡೆಗೆ ಇದ್ದ ತೊಡಕೂ ನಿವಾರಣೆಯಾಗಿದ್ದರಿಂದ ಚಿತ್ರತಂಡ ಹೊಸ ಹುಮ್ಮಸ್ಸಿನಲ್ಲಿದೆ. 'ರಾಬರ್ಟ್' ಹವಾ ಇಳಿಯುವುದರ ಒಳಗೇ ಪುನೀತ್ ರಾಜ್‌ಕುಮಾರ್ ಅವರ 'ಯುವರತ್ನ' ಗಾಂಧಿನಗರಕ್ಕೆ ದಾಪುಗಾಲು ಹಾಕಲಿದೆ. ಏಪ್ರಿಲ್ 24 'ಯುವರತ್ನ' ಬಿಡುಗಡೆ ನಿಕ್ಕಿಯಾಗಿದೆ. ಮೇ ಮತ್ತು ಜೂನ್ ತಿಂಗಳಲ್ಲಿ ಯಾವ ಸ್ಟಾರ್ ನಟರ ಚಿತ್ರವೂ ಬಿಡುಗಡೆಯ ಘೋಷಣೆ ಆಗಿಲ್ಲ. ಹಾಗೆಂದು ಆ ತಿಂಗಳಲ್ಲಿ ಪಟಾಕಿ ಸದ್ದು ಕ್ಷೀಣಿಸಲಿದೆ ಎಂದು ಭಾವಿಸಬೇಕಿಲ್ಲ. ಯಾಕೆಂದರೆ ಸುದೀಪ್ ಅಭಿನಯದ 'ಕೋಟಿಗೊಬ್ಬ 3' ತಯಾರಾಗಿಯೇ ವರ್ಷಗಳು ಕಳೆದಿವೆ. ಅವರದ್ದೇ 'ವಿಕ್ರಾಂತ್ ರೋಣ' ಕೂಡ ಇದೇ ವರ್ಷ ಬಿಡುಗಡೆಯಾಗುವ ನಿರೀಕ್ಷೆ ಇದೆ. ಆ ಎರಡು ಚಿತ್ರಗಳಲ್ಲೊಂದು ಮೇ, ಜೂನ್ ನಡುವೆ ಚಿತ್ರಮಂದಿರಕ್ಕೆ ಬಂದರೆ ಅಚ್ಚರಿಯಿಲ್ಲ. ಇನ್ನು ಜುಲೈ ತಿಂಗಳನ್ನಂತೂ 'ಕೆಜಿಎಫ್ 2' ಸಿನಿಮಾಗೆ ಬರೆದುಕೊಟ್ಟಾಗಿದೆ.

ಇವನ್ನು ಹೊರತುಪಡಿಸಿ ದುನಿಯಾ ವಿಜಯ್ ಅಭಿನಯದ 'ಸಲಗ', ಶ್ರೀಮುರಳಿ ಅಭಿನಯದ 'ಮದಗಜ' ಕೂಡ ಚಿತ್ರಮಂದಿರಕ್ಕೆ ಪ್ರೇಕ್ಷಕರನ್ನು ಎಳೆದುತರುವ ಸಾಮರ್ಥ್ಯ ಉಳ್ಳ ಸಿನಿಮಾಗಳೇ. ಅಂದಮೇಲೆ ಕೇಳಬೇಕೆ? ಫೆಬ್ರುವರಿ ತಿಂಗಳು ಹೇಗಾದರೂ ಕಳೆದುಬಿಟ್ಟರೆ ಮಾರ್ಚ್‌ನಿಂದ ಸಿನಿಮಾ ಹಬ್ಬ ಶುರು. ಇದೇ ಲೆಕ್ಕಾಚಾರದಲ್ಲಿ ಹೌಸ್‌ಫುಲ್‌ಬೋರ್ಡ್ ಕೂಡ ಮನಸೊಳಗೇ ಮಂಡಿಗೆ ತಿನ್ನುತ್ತ ಕಾಯುತ್ತಿದೆ. ■

# ಅಥಿರಾ ಫಸ್ಟ್ ಹಾಫ್

ಕನ್ನಡದ ನೆಲ ಮತ್ತು ಕೇರಳ ಮೂಲ ಈ ಎರಡರ ಸತ್ವವನ್ನುಂಡು ಬೆಳೆದ ಹುಡುಗಿ ಅಥಿರಾ. ಹೀಗಾಗಿಯೇ ಕನ್ನಡ ಮತ್ತು ಮಲಯಾಳಂ ಎರಡೂ ಚಿತ್ರರಂಗದಲ್ಲಿ ಒಂದೊಂದು ಕಾಲೂರಿ ನಿಂತಿದ್ದಾರೆ.

ಅಥಿರಾ ತಂದೆ, ತಾಯಿ ಇಬ್ಬರೂ ಕೇರಳ ಮೂಲದವರು. ಆದರೆ ತಂದೆ ಹುಟ್ಟಿ ಬೆಳೆದಿದ್ದೆಲ್ಲ ಬೆಂಗಳೂರಿನಲ್ಲಿಯೇ. ಮದುವೆಯಾಗಿ ಕರ್ನಾಟಕಕ್ಕೆ ಬಂದ ತಾಯಿ ಕೂಡ ಈಗ ಕನ್ನಡದವರೇ ಆಗಿಬಿಟ್ಟಿದ್ದಾರೆ. ಅವರಿಬ್ಬರ ನಲ್ಮೆಯಲ್ಲಿ ಬೆಳೆಯುತ್ತಿರುವ ಅಥಿರಾಗೆ ಕನ್ನಡ ಮತ್ತು ಮಲಯಾಳಂ ಎರಡೂ ಭಾಷೆ ಸಲೀಸು.

ಅಥಿರಾ ಮೊದಲ ಸಲ ಕ್ಯಾಮೆರಾ ಎದುರು ನಿಂತಿದ್ದು ಎರಡನೇ ತರಗತಿಯಲ್ಲಿ. ಇವರ ಟ್ಯೂಷನ್ ಟೀಚರ್ ಮಗಳು ನಟಿಯಾಗಿದ್ದಳು. ಅವರೇ ಅಥಿರಾಳನ್ನು ನೋಡಿ ಇಂಗ್ಲಿಷ್ ಕಿರುಚಿತ್ರವೊಂದರಲ್ಲಿ ನಟಿಸುವ ಅವಕಾಶ ದೊರಕಿಸಿಕೊಟ್ಟರು. ಆಗಲೇ ಅವರಿಗೆ ಕ್ಯಾಮೆರಾ ಎದುರಿನ ಲೋಕ ಮ್ಯಾಜಿಕಲ್ ಅನಿಸಿದ್ದು; 'ನಾನು ನಟಿಯಾಗಬೇಕು' ಎಂಬ ಕನಸು ಮೊಳೆತಿದ್ದು.

ಈ ಗಾ ಗ ಲೇ ಮಲಯಾಳಂ ಸಿನಿಮಾವೊಂದರಲ್ಲಿ ನಟಿಸಿ ಬಂದಿರುವ ಅಥಿರಾ, 'ಹಾಫ್' ಸಿನಿಮಾದ ಮೂಲಕ ಚಂದನವನವನ್ನೂ ಪ್ರವೇಶಿಸುತ್ತಿದ್ದಾರೆ. ಈಗಿನ್ನೂ ಪಿಯುಸಿ ಓದುತ್ತಿರುವ ಹುಡುಗಿಗೆ ಓದಿನ ಜೊತೆಗೆ ನಟನೆಯನ್ನೂ ತೂಗಿಸಿಕೊಂಡು ಹೋಗುವುದು ಸವಾಲು ಎಂದೇ ಯಾವಾಗಲೂ ಅನಿಸಿಲ್ಲವಂತೆ.

'ನಾನು ತುಂಬ ಟಿಕ್‌ಟಾಕ್ ಮಾಡ್ತಿನಿ. ಟಿಕ್‌ಟಾಕ್ ಮಾಡ್ತಾನೇ ನಟನೆಯನ್ನು ಕಲಿತಿದ್ದು. ನಂತರ 'ಹಾಫ್' ಸಿನಿಮಾಗೆ ಆಡಿಷನ್‌ಗೆ ಹೋದೆ. ಆಯ್ಕೆಯೂ ಆದೆ. ಅದರ ಕಥೆ ತುಂಬ ಚೆನ್ನಾಗಿದೆ. ವಿದ್ಯಾರ್ಥಿನಿ ಮತ್ತು ನಂತರದ ಯುವತಿ ಹೀಗೆ ಎರಡು ಶೇಡ್‌ಗಳು ಇರುವ ಪಾತ್ರ ಮಾಡುತ್ತಿದ್ದೇನೆ' ಎಂದು ಹೇಳುವ ಅವರು 'ಸೆಟ್‌ನಲ್ಲಿ ನಿರ್ದೇಶಕರು ಹೇಳಿಕೊಟ್ಟ ಹಾಗೆ ಮಾಡುತ್ತೇನೆ. ಅದಕ್ಕಾಗಿ ವಿಶೇಷ ಸಿದ್ಧತೆಯೇನೂ ಮಾಡಿಕೊಳ್ಳುವುದಿಲ್ಲ' ಎನ್ನುತ್ತಾರೆ.

ನಟನೆ ಅವರ ಪಾಲಿಗೆ ಒಂದು ಹವ್ಯಾಸವಷ್ಟೆ. ಇದರಲ್ಲಿಯೇ ಬದುಕು ಕಟ್ಟಿಕೊಳ್ಳಬೇಕು ಎಂಬ ಅನಿವಾರ್ಯ ಮತ್ತು ಉದ್ದೇಶ ಎರಡೂ ಅವರಿಗಿಲ್ಲ. 'ಸಾಫ್ಟ್‌ವೇರ್ ಇಂಜಿನಿಯರ್ ಆಗಬೇಕು ಎಂಬುದು ನನ್ನ ಆಸೆ. ನಟನೆಯನ್ನು ಹವ್ಯಾಸವಾಗಿ ಮುಂದುವರಿಸಿಕೊಂಡು ಹೋಗುತ್ತೇನೆ' ಎನ್ನುತ್ತಾರೆ ಅವರು.

'ನನಗೆ ಇಂಥದ್ದೇ ಪಾತ್ರಗಳಲ್ಲಿ ನಟಿಸಬೇಕು ಎಂಬ ಆಸೆಯೇನೂ ಇಲ್ಲ. ಪಾತ್ರಕ್ಕೆ ಅಗತ್ಯವಾದರೆ ಗ್ಲಾಮರಸ್ ಆಗಿಯೂ ಕಾಣಿಸಿಕೊಳ್ಳಬಲ್ಲೆ' ಎನ್ನುವ ಅಥಿರಾಗೆ ಮತ್ತೆರಡು ಕನ್ನಡ ಸಿನಿಮಾದಲ್ಲಿ ನಟಿಸುವ ಅವಕಾಶ ಬಂದಿದೆಯಂತೆ. ಹಾಗೆಯೇ ಒಂದು ಮಲಯಾಳಂ ಸಿನಿಮಾಗೂ ಅವರು ಸಹಿ ಹಾಕಿದ್ದಾರೆ.

ಮುಂದೆ ಸಾಫ್ಟ್‌ವೇರ್ ಇಂಜಿನಿಯರ್ ಆದರೆ ನಟನೆಗೆ ಸಮಯ ಹೊಂದಿಸಿಕೊಳ್ಳುವುದು ಕಷ್ಟವಾಗುವುದಿಲ್ಲವೇ ಎಂದು ಕೇಳಿದರೆ ಅವರು ತಮ್ಮ ಮತ್ತೆರಡು ಆಸೆಗಳನ್ನು ಬಿಚ್ಚಿಡುತ್ತಾರೆ.

'ನನಗೆ ಪ್ರಪಂಚ ಪರ್ಯಟನೆ ಮಾಡಬೇಕು ಎಂಬ ಆಸೆ ಇದೆ. ಹಾಗೆಯೇ ಅಮೆರಿಕದಲ್ಲಿ ಸೆಟಲ್ ಆಗಬೇಕು ಎಂಬ ಗುರಿ ಇದೆ. ಅಮೆರಿಕಕ್ಕೆ ಹೋದಮೇಲೂ ಒಳ್ಳೆಯ ಅವಕಾಶಗಳು ಸಿಕ್ಕರೆ ಇಲ್ಲಿಗೆ ಬಂದು ನಟಿಸಿ ಹೋಗುತ್ತೇನೆ' ಎನ್ನುವ ಅಥಿರಾ, ತಮ್ಮ ಸಿನಿ ಪಯಣದ ಫಸ್ಟ್‌ಹಾಫ್ ಅನ್ನು ರೂಪಿಸಿಕೊಳ್ಳುವ ಧಾವಂತದಲ್ಲಿದ್ದಾರೆ. ■

